# ತಾರಮ್ಮಯ್ಯ ಯದುಕುಲ ವಾರಿಧಿ ಚಂದ್ರಮನ

ಶ್ರೀ ಕೃಷ್ಣನು ಗೋಕುಲವನ್ನು ಬಿಟ್ಟು ಮಥುರೆಗೆ ಹೋದ ಸಂಗತಿ ತಿಳಿದು ಗೋಕುಲದ ಗೋಪಿಯರು ಕೃಷ್ಣನ ವಿರಹದಿಂದ ವ್ಯಾಕುಲಗೊಂಡ ಬಗೆ ಇಲ್ಲಿ ವರ್ಣಿತವಾಗಿದೆ.

1. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao, page No. 297.
2. **Ref.:** Shri Purandara Dasara Sahitya Part – 4, Krishna Leela, edited by Shri Betageri Krishna Sharma and Shri Bengeri Huchhu Rayaru, page No. 16.
3. **Ref.:** Samagra Dasa Sahity, Samputa 3.1 published by Kannada & Culture Dept, Govt of Karnataka, Bengaluru, page No. 94.
4. **Note:** The wordings mainly are as per the book in Ref. 2 & Ref. 3 above. The difference in wordings of book in Ref.1 are marked in yellow highlights.
5. **Note:** The Ankita is different in Ref. 3. We have considered book in Ref.2 & Ref. 1 as standard and taken that Ankita for listing.

ರಾಗ: ನಾದ ನಾಮ ಕ್ರಿಯ ತಾಳ: ಆದಿ

ತಾರಮ್ಮಯ್ಯ ಯದುಕುಲ ವಾರಿಧಿ ಚಂದ್ರಮನ ॥ ಪ ॥

ಮಾರ ಜನಕನ ಮೋಹನಾಂಗನ
ಸೇರಿ ಸುಖಿಸೆ (ಸುಖಿಸಲು) ಹಾರೈಸಿ ಬಂದೆವು ॥ ಅಪ ॥

ಬಿಲ್ಲ ಹಬ್ಬಗಳಂತೆ ಅಲ್ಲಿ ಬೀದಿ ಶೃಂಗಾರವಂತೆ
(ಮಲ್ಲರ) ಮಲ್ಲ ಕಾಳಗ ಮದ್ದಾನೆಗಳಂತೆ (ಮದ್ದಾನೆಯಂತೆ)
ಪುಲ್ಲಾಕ್ಷನು ತಾನಲ್ಲಿಗೆ ತೆರಳಿದ ॥ ೧ ॥

ಮಧುರಾ ಪುರವಂತೆ (ಪುರಿಯಂತೆ) ಅಲ್ಲಿ ಮಾವ ಕಂಸನಂತೆ
ಒದಗಿದ ಮದಗಜ ತುರಗ ಸಾಲಿನಲಿ
ಮದನ ಮೋಹನ ಕೃಷ್ಣ ಮಧುರೆಗೆ ತೆರಳಿದ ॥ ೨ ॥

ಅತ್ತೆ ಮಾವನ ಬಿಟ್ಟು ಬಂದೆವು ಹಿತ್ತಿಲ ಬಾಗಿಲಿಂದ

ಭಕ್ತ ವತ್ಸಲನ ಬಹು ನಂಬಿದ್ದೆವು
ಉತ್ಸಾಹ ಭಂಗವ ಮಾಡಿದನಮ್ಮ || ೩ ||

ರಂಗನ ನೆರೆ ನಂಬಿ ಬಂದೆವು ಸಂಗ ಸುಖವ ಬಯಸಿ
ಭಂಗಿಸಿ ನಮ್ಮನು ಹಾಗೆ (ಹ್ಯಾಂಗೆ) ಪೋದನಮ್ಮ
ಮಂಗಳ ಮೂರುತಿ ಮದನ ಗೋಪಾಲನು || ೪ ||

ಶೇಷಗಿರಿಯ ಮೇಲೆ ಹರಿ ತಾ ವಾಸವಾಗಿಹ ಕಾಣೆ
ಸಾಸಿರ ನಾಮದ ಒಡೆಯನೆಂದೆನಿಸಿದ
(ಶ್ರೀಶ) ಶ್ರೀ ಪುರಂದರ ವಿಠ್ಠಲ ರಾಯನ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಯದುಕುಲ ವಾರಿಧಿ ಚಂದ್ರಮ** = ಕೃಷ್ಣ

**ಬಿಲ್ಲು ಹಬ್ಬ** = ಕೃಷ್ಣನನ್ನು ಮೋಸಗೊಳಿಸಬೇಕೆಂದು ಕಂಸನು ಹೂಡಿದ ಧನುರ್ಯಾಗ

**ಮಲ್ಲ ಕಾಳಗ** = ಚಾಣೂರ - ಮುಷ್ಟಿಕರ ಕೂಡ ನಡೆದ ಕುಸ್ತಿ

**ಮದ್ದಾನೆ** = ಕುವಲಯಾ ಪೀಡ (ಕಂಸನ ದುಷ್ಟ ಮದ್ದಾನೆ)

**ಪುಲ್ಲಾಕ್ಷ** = ಅರಳಿದ ಕಮಲದಂತಿರುವ ಕಣ್ಣು

**ಶೇಷಗಿರಿ** = ತಿರುಪತಿ

**Classification:** Keerthane
**Ankita:** Srisha Purandara Vittala
**Location:** Tirupati
**Category:** Krishna Leele
**Group Words:** Krishna, Chandra, sukha, habba, gaja, mathura, kamsa, kudure, ranga, mangala, gopala,
**Pravachana:** NA
**Explanation:** NA